ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ಸಪ್ಲೈ ಮಾಡಿರತಕ್ಕ ಪಂಪ್‌ಸೆಟ್‌ಗಳಲ್ಲಿ ಮುಕ್ಕಾಲು ಭಾಗ ಸ್ಟಾರ್ಟರುಗಳು ಸರಿಯಿಲ್ಲ ಎಂದು ವಾಪಸು ಕೊಟ್ಟಿದ್ದಾರೆ. ಅವುಗಳನ್ನು ರೀಪ್ಲೇಸ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಸರ್ಕಾರದ ಗಮನಕ್ಕೆ ತಂದರೆ ಖಂಡಿತವಾಗಿ ಪರಿಶೀಲನೆ ಮಾಡಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಪಂಪ್‌ಸೆಟ್ಟುಗಳನ್ನು ಸಪ್ಲೈ ಮಾಡಿದಾಗ ಅದರ ಹಣವನ್ನು ಮರು ಪಾವತಿ ಮಾಡುವುದಕ್ಕೆ ಗೊತ್ತು ಮಾಡಿರುವ ಅವಧಿಯನ್ನು 8 ವರ್ಷದಿಂದ 10 ವರ್ಷಕ್ಕೆ ಹೆಚ್ಚಿಸು ವುದರಿಂದ ರೈತರಿಗೆ ಸ್ವಲ್ಪ ಉತ್ತೇಜನ ಕೊಟ್ಟ ಹಾಗೆ ಆಗುತ್ತದೆ. ಹೀಗೆ ಮಾಡುವುದಕ್ಕೆ ಇರುವ ತೊಂದರೆ ಏನು, ಸ್ವಾಮಿ ?

ಶ್ರೀ ಎಚ್. ಸಿ. ಬೋರಯ್ಯ.—ಅದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಒಂದು ಪಂಪ್ ಸೆಟ್ಟಿನ 'ಲೈಫ್' 8 ವರ್ಷ ಎಂದು ಲೆಕ್ಕ ಇಟ್ಟುಕೊಂಡು 8 ವರ್ಷದ ಕಂತುಗಳು ಎಂದು ಗೊತ್ತು ಮಾಡಿದ್ದೇವೆ.

Gradation Lists of I and II Division Clerks working under Divisional Commissioner, Gulbarga.

*Q.—137. Sri MAHANTASWAMY (Shahapur). –

Will the Government be pleased to state :—

(a) whether the Government is aware that Gradation lists in respect of the posts of First Division and Second Division Clerks as on 1st January 1957 onwards working under Divisional Commisioner, Gulbarga, has not been finalised ;

(b) whether it is a fact that many irregular promotions in Gulbarga Division have been regularised without finalisati on and preparation of Gradation list ?

A.—Sri M. V. KRISHNAPPA (Minister for Revenue).—

(a) Gradation lists of First Division and Second Division Clerks have been finalised up-to-date.

(b) No.

ಶ್ರೀ ಮಹಂಥಸ್ವಾಮಿ.—ಪ್ರಥಮ ಮತ್ತು ದ್ವಿತೀಯ ದರ್ಜೆ ಗುಮಾಸ್ತರ ಸೀನಿಯಾರಿಟಿ ಪಟ್ಟಿಯನ್ನು ಯಾವಾಗ ನಿರ್ಧರಿಸಲಾಯಿತು ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಳೆದ ವರ್ಷದಲ್ಲಿ ಮಾಡಿದೆವು, ತಾರೀಖು ಗೊತ್ತಿಲ್ಲ.

Collection of Foodgrains by Government under the Levy of Foodgrains Scheme.

*Q.—195. Sri A. J. DODDAMETI (Ron).—

Will the Government be pleased to state :—

(a) the quantity of food grains collected by Government under the levy of foodgrains scheme during the years 1964-65 and 1965-66 in the State (Districtwise information regarding paddy and jowar may be furnished separately) ;

(*b*) the purchasing price per quintal of paddy and jowar so collected ;

(*c*) the selling price per Kilogram of rice hulled from the purchased paddy and jowar fixed by them, while selling to the people ;

(*d*) whether they are aware that there is wide difference in the purchasing and selling prices ?

A.—SRI D. DEVARAJ URS (Minister for Transport and Tourism [on behalf of SRI B. D. JATTI (Minister for Food)].—

(*a*), (*b*) and (*c*) *Vide* statement placed on the Table of the House.

(*d*) The difference between the purchase prices and sale price covers several items of expenditure such as a transport, handling and incidental charges, insurance, margin to wholesalers and retailers and cost of gunny.

ಶ್ರೀ ಎ. ಜೆ. ಡೊಡ್ಡಮೇಟಿ.—ಜೋಳವನ್ನು ಮಾರಾಟ ಮಾಡುವ ಬೆಲೆ ಬಿಜಾಪುರ ಜಿಲ್ಲೆಯಲ್ಲಿ ಕ್ವಿಂಟಾಲಿಗೆ 61 ರೂಪಾಯಿ, ಬೆಂಗಳೂರಿನಲ್ಲಿ 72 ರೂಪಾಯಿ ಎಂದು ಹೇಳಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ನಿಷ್ಕರ್ಷೆ ಮಾಡಿರುವ ಬೆಲೆ ಎಷ್ಟು ?

ಶ್ರೀ ಡಿ. ದೇವರಾಜ ಅರಸ್.—ಅದು ಈಗ ನನ್ನಲ್ಲಿ ಸಿದ್ಧವಾಗಿಲ್ಲ. ಬೇರೆ ಕಡೆಗಳಲ್ಲಿ ಆಯಾ ಜಿಲ್ಲೆಯ ಡೆಪ್ಯುಟಿ ಕಮಿಷನರು ಗೊತ್ತು ಮಾಡುತ್ತಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ನನಗೆ ಗೊತ್ತಿದ್ದಮಟ್ಟಿಗೆ ಸರ್ಕಾರದವರು ಜೋಳವನ್ನು ಕೊಳ್ಳುವ ಧಾರಣೆ 48 ರಿಂದ 52 ರೂಪಾಯಿವರೆಗೆ ಇರುತ್ತದೆ. ಅದನ್ನು ಜನರಿಗೆ ಮಾರಾಟ ಮಾಡುವ ಬೆಲೆ ಕನಿಷ್ಟ 61 ರೂಪಾಯಿ. ಅಂದರೆ 10 ರೂಪಾಯಿ ವ್ಯತ್ಯಾಸವಾಯಿತು. ಒಂದು ಕ್ವಿಂಟಾಲಿಗೆ ಹತ್ತು ರೂಪಾಯಿ ವ್ಯತ್ಯಾಸವಾಗಲು ಕಾರಣವೇನು ?

ಶ್ರೀ ಡಿ. ದೇವರಾಜ ಅರಸ್.—52 ರೂಪಾಯಿಗೆ ತೆಗೆದುಕೊಳ್ಳುವುದಕ್ಕೆ ಶೇಖರಣೆ ಮಾಡುವ ಖರ್ಚು, ಡಿಟೀರಿಯೊರೇಷನ್ ಆಗತಕ್ಕದ್ದು, ಸ್ಥಳದಿಂದ ಸ್ಥಳಕ್ಕೆ ಸಾಗಾಣಿಕೆ ಮಾಡತಕ್ಕದ್ದು, ಚೀಲಗಳ ಖರ್ಚು, ಎಲ್ಲವನ್ನೂ ಗಮನಕ್ಕೆ ತೆಗೆದುಕೊಂಡರೆ 8-10 ರೂಪಾಯಿಗಳ ವ್ಯತ್ಯಾಸವಾಗುತ್ತದೆ.

ಶ್ರೀ ಎ. ಜೆ. ದೊಡ್ಡಮೇಟಿ.—ವ್ಯಾಪಾರಸ್ಥರು ಒಂದು ಕ್ವಿಂಟಾಲಿಗೆ ಐದು ರೂಪಾಯಿ ತೆಗೆದುಕೊಂಡು ಮಾರಾಟ ಮಾಡುವುದಕ್ಕೆ ಸಿದ್ಧವಾಗಿದ್ದಾರೆ. ಸಹಕಾರಿ ಅಂದೋಳನದೊಳಗೆ ಸಹಕಾರಿ ಸಂಸ್ಥೆಗಳು, ಒಬ್ಬ ಸಿಪಾಯಿ ಹೋಗಿ ಬಂದದ್ದಕ್ಕೆ ಎಲ್ಲದಕ್ಕೂ ಖರ್ಚನ್ನು ಹಾಕಿ ಅನವಶ್ಯಕವಾದ ಖರ್ಚನ್ನು ತುಂಬಿ, ಡೆಪ್ಯುಟಿ ಕಮಿಷನರ ಮೇಲೆ ತಮ್ಮ ವರ್ಚಸ್ಸನ್ನು ಉಪಯೋಗಿಸಿ ಹೆಚ್ಚು ಹೆಚ್ಚು ಧಾರಣೆಯನ್ನು ತೆಗೆದುಕೊಳ್ಳುವುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಡೆಪ್ಯುಟಿ ಕಮಿಷನರ ಮೇಲೆ ಯಾರು ವರ್ಚಸ್ಸನ್ನು ಬೀರಿದರೂ ಆ ಹಣ ಸರ್ಕಾರಕ್ಕೆ ಬರುವುದಾಗಿದೆ. ಒಂದೊಂದು ಜಿಲ್ಲೆಯಲ್ಲಿಯೂ ಮಾರುವ ಬೆಲೆ ಸ್ವಲ್ಪ ಹೆಚ್ಚು ಕಂಡರೂ ಕೂಡ ಯಾವುದೇ ಒಬ್ಬ ಖಾಸಗಿ ಜನರಿಗೆ ಅದ ಹೋಗುವುದಿಲ್ಲ. ಆದುದರಿಂದ ಡೆಪ್ಯುಟಿ ಕಮಿಷನರ ಮೇಲೆ ಯಾವ ವರ್ಚಸ್ಸನ್ನೂ ಬೀರುವುದಕ್ಕೆ ಸಾಧ್ಯವಿಲ್ಲ. ಸೊಸೈಟಿಗಳಿಂದ ತೆಗೆದುಕೊಂಡು ಮಾರಾಟ ಮಾಡುವುದಕ್ಕೆ ಸ್ವಲ್ಪ ಖರ್ಚು ಬೀಳುತ್ತದೆ. ಆದರೆ ವರ್ತಕರು 52 ರೂಪಾಯಿಗಳಿಗೆ ಕೊಂಡುದನ್ನು 80 ರೂಪಾಯಿ, 90 ರೂಪಾಯಿಗಳಿಗೆ ಮಾರುವುದು ಮಾನ್ಯ ಸದಸ್ಯರಿಗೆಲ್ಲ ಗೊತ್ತು.

ಶ್ರೀ ಎ. ಜೆ. ದೊಡ್ಡಮೇಟಿ.—ಸಾಮಾನ್ಯವಾಗಿ ರೈತರಿಂದ 52 ರೂಪಾಯಿಗೆ ಕೊಂಡು ಮರು ದಿವಸ ಅದನ್ನು ಅವನು ಖರೀದಿ ಮಾಡುವುದಕ್ಕೆ ಹೋದರೆ 62 ರೂಪಾಯಿ ತೆಗೆದುಕೊಂಡರೆ ಆಗ ಅವನ ಪ್ರತಿಕ್ರಿಯೆ ಏನಾಗುತ್ತದೆ ?

ಶ್ರೀ ಡಿ. ದೇವರಾಜ ಅರಸ್.—ಮರುದಿವಸ ಅದನ್ನು ಮಾರಾಟ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಸ್ವಲ್ಪ ಸಮಯ ಹಿಡಿಯುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸರ್ಕಾರ ಧಾನ್ಯದ ಶೇಖರಣೆಯ ದೃಷ್ಟಿಯಲ್ಲಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳದೆ ಇದ್ದು ಮಂಗಳೂರಿನ ಅಕ್ಕಿಯನ್ನು ಬೆಂಗಳೂರಿನಲ್ಲಿ ಸ್ಟಾಕ್ ಮಾಡುವುದು, ಬೆಂಗಳೂರಿನ ಅಕ್ಕಿಯನ್ನು ಶಿವಮೊಗ್ಗದಲ್ಲಿ ಸ್ಟಾಕ್ ಮಾಡುವುದು, ಈ ತರಹ ಮಾಡುವುದರಿಂದ ಇಷ್ಟು ಬೆಲೆ ಆಗುವುದಕ್ಕೆ ಕಾರಣವಲ್ಲವೇ ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—ಮಂಗಳೂರಿನ ಅಕ್ಕಿಯನ್ನು ಮಂಗಳೂರಿನಲ್ಲಿಯೇ ಸ್ಟಾಕ್ ಮಾಡುತ್ತೇವೆ, ಶಿವಮೊಗ್ಗ ಅಕ್ಕಿಯನ್ನು ಶಿವಮೊಗ್ಗದಲ್ಲೇ ಸ್ಟಾಕ್ ಮಾಡುತ್ತೇವೆ. ಆದರೆ ಸಂದರ್ಭಾನುಸಾರವಾಗಿ ಯಾವುದಾದರೂ ಒಂದು ಜಿಲ್ಲೆಯಲ್ಲಿ ಹೆಚ್ಚು ಧಾನ್ಯ ವಸೂಲಿ ಮಾಡಿದರೆ ಅದನ್ನು ಯಾವ ಜಿಲ್ಲೆಯಲ್ಲಿ ಹೆಚ್ಚಾಗಿ ತಿನ್ನುತ್ತಾರೆಯೋ ಅಂಥ ಜಿಲ್ಲೆಗೆ ಸಾಗಿಸಿ ಅಲ್ಲಿ ಸಂಗ್ರಹ ಮಾಡುತ್ತೇವೆ. ಯಾವುದಾದರೂ ಜಿಲ್ಲೆಯಲ್ಲಿ ಆಹಾರ ಬೇಕಾದರೆ ಅದನ್ನು ಯಾವತ್ತು ತಿನ್ನಬೇಕೋ ಆ ದಿನ ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಆದ್ದರಿಂದ ಅಲ್ಲಿ ತೆಗೆದುಕೊಂಡು ಹೋಗಿ ಸಂಗ್ರಹ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಸ್ಥಳದಿಂದ ಸ್ಥಳಕ್ಕೆ ಸಾಗಿಸುವ ಖರ್ಚು ಬಿದ್ದೇ ಬೀಳುತ್ತದೆ.

ಶ್ರೀ ಎಂ. ಆರ್. ಪಾಟೀಲ್.—ಸಹಕಾರಿ ಸಂಸ್ಥೆಗಳು ಜೋಳ ಮತ್ತು ಬತ್ತವನ್ನು ಕೊಳ್ಳುವ ಕೇಂದ್ರಗಳಲ್ಲಿ ಒಬ್ಬ ಕಾರಕೂನನ್ನು ಇಡಬೇಕಾಗುತ್ತದೆ, ಅಲ್ಲಿಂದ ಸಾಗಾಣಿಕೆಯ ಖರ್ಚನ್ನು ಹೊರಬೇಕಾಗುತ್ತದೆ. ವೇರ್ ಹೌಸಿಗೆ ತಂದಮೇಲೆ ಅದರ ಚಾರ್ಜಸ್ ಕೊಡಬೇಕಾಗುತ್ತದೆ, ಹ್ಯಾಂಡ್ಲಿಂಗ್ ಚಾರ್ಜಸ್ ಕೊಡಬೇಕಾಗುತ್ತದೆ, ಕೇಂದ್ರ ಬ್ಯಾಂಕಿನಿಂದ ಪಡೆದ ಸಾಲಕ್ಕೆ ಬಡ್ಡಿಯನ್ನು ಕೊಡಬೇಕಾಗುತ್ತದೆ, ಇನ್‌ಷೂರೆನ್ಸ್ ಕೊಡಬೇಕಾಗುತ್ತದೆ, ಇವೆಲ್ಲವನ್ನೂ ನೋಡಿಕೊಂಡು ಜಿಲ್ಲಾಧಿಕಾರಿಗಳು ಗೊತ್ತು ಮಾಡುವ ಬೆಲೆ ಅದಕ್ಕಿಂತ ಕಡಮೆ ಇರುವುದು ಸರ್ಕಾರದ ಲಕ್ಷ್ಯಕ್ಕೆ ಬಂದಿದೆಯೇ, ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—ಕೆಲವು ಸಂದರ್ಭಗಳಲ್ಲಿ ಹಾಗೂ ಆಗಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ರೈತರ ಕಡೆಯಿಂದ 51 ಕ್ಕೆ ತೆಗೆದುಕೊಂಡು 62 ಕ್ಕೆ ಸರ್ಕಾರದವರು ಮಾರುತ್ತಿದ್ದಾರೆ. ಇದರ ಪರಿಣಾಮವೇನು ?

ಶ್ರೀ ಡಿ. ದೇವರಾಜ್ ಅರಸ್.—ಪರಿಣಾಮವೇನೂ ಇಲ್ಲ. ಸರಿಯಾಗಿ ಆಗಿದೆ 8-10 ರೂಪಾಯಿಗಳನ್ನು ಹೆಚ್ಚಿಗೆ ಮಾರಾಟ ಬೆಲೆಯಂತೆ ಸರ್ಕಾರ ತೆಗೆದುಕೊಳ್ಳುವುದರಲ್ಲಿ ಮಾನ್ಯ ಸದಸ್ಯರಿಗೇನಾದರೂ ಅನುಮಾನವಿದ್ದರೆ ಹೇಳಲಿ. ಸರ್ಕಾರವೇನೂ ಲಾಭ ಇದರಿಂದ ಮಾಡುತ್ತಾ ಇಲ್ಲ. 7-8 ರೂಪಾಯಿಗಳ ಅಂತರ ಇರಲೇಬೇಕಾಗುತ್ತದೆ. ಸೊಸೈಟಿಗಳಿಗೆ ತಂದು ಮಾರಾಟ ಮಾಡುವಾಗ ಅದರಲ್ಲಿ ಅನೇಕ ಇನ್‌ಸಿಡೆಂಟಲ್ ಚಾರ್ಜಸ್ ಸೇರಿಸಬೇಕಾಗಿ ಬರುತ್ತದೆ. ಆದರೆ ಖಾಸಗೀ ಜನಗಳಿಂದ ಪದಾರ್ಥಗಳು ಮಾರಾಟವಾಗುವುದಾದರೆ ಆ ಒಂದು ಮಾರಾಟದಿಂದ ಜನಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ಏಕೆಂದರೆ ಅವರಿಂದ ಆಹಾರ ಪದಾರ್ಥಗಳ ಒಂದು ನಿಗದಿ ಬೆಲೆಗೆ ಸಿಕ್ಕುತ್ತವೆ.

Mr. SPEAKER.—In the private sector it will change hands and also sales-tax is added and ultimately handling charges would be lower if it is handled by a single agency.

ಶ್ರೀ ಎ. ಜೆ. ದೊಡ್ಡಮೇಟಿ.—ಜನರು ಕೊಳ್ಳುವಾಗ ಪ್ರೈವೇಟ್ ಸೆಕ್ಟಾರ್, ಸಹಕಾರ ಸಂಘ ಇವನ್ನಾವುದೂ ನೋಡುವುದಿಲ್ಲ. ನಾನಾ ಕಡೆಗಳಲ್ಲಿ ಧಾನ್ಯಗಳು ಯಾವರೀತಿ ಉತ್ಪನ್ನವಾಗುತ್ತದೋ ಆ ರೀತಿಯಲ್ಲಿ ಬೆಲೆಗಳನ್ನು ಸಹ ನಿರ್ಧರಿಸಿರುತ್ತಾರೆ. ಅದು ಸರ್ಕಾರದ ತಪ್ಪೋ ಯಾರದೋ ಗೊತ್ತಿಲ್ಲ. ಈಗಿನ ವ್ಯವಸ್ಥೆಯಲ್ಲೇನಾದರೂ ದೋಷವಿದ್ದರೆ ಸರ್ಕಾರದವರು ಕನಿಷ್ಟ ಕೇಳುವುದಕ್ಕಿಂತ ಮಾರಾಟ ಧಾರಣೆ ಕೇವಲ ಐದು ರೂಪಾಯಿಗಳಿಗೂ ಹೆಚ್ಚು ಆಗಬಾರದು.

ಶ್ರೀ ಡಿ. ದೇವರಾಜ್ ಅರಸ್.—ಸರ್ಕಾರ ಮಾಡಿರತಕ್ಕ ವ್ಯವಸ್ಥೆಯಲ್ಲಿ ಯಾವ ದೋಷವೂ ಕಂಡು ಬಂದಿಲ್ಲ. ಮಿನಿಮಂ ಎಷ್ಟು ಸಾಧ್ಯವೋ ಅಷ್ಟನ್ನು ಮಾಡುವುದಕ್ಕೆ ಸಾಧ್ಯವಾದ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. 50-52 ರೂಪಾಯಿಗಳಿಗೆ ಸರ್ಕಾರದವರು ಕೊಂಡಂತಹ ಜೋಳವನ್ನು 62 ರೂಪಾಯಿಗಳಿಗೆ ಮಾರಾಟ ಮಾಡಿದಾಗ ಖಾಸಗೀ ಜನಗಳು 52-53 ರೂಪಾಯಿಗಳಿಗೆ ಜೋಳವನ್ನು ಕೊಂಡು 82 ರೂಪಾಯಿಗಳಿಗೆ ಮಾರಿರುವ ವಿಚಾರವನ್ನು ಮಾನ್ಯ ಸದಸ್ಯರು ಮರೆಯಬಾರದು.

ಶ್ರೀಮತಿ ಸುಶೀಲಾಬಾಯಿ ಹೀರಾಚೆಂದ್ ಷಾ.—ಈಗ ನಮ್ಮ ಕಡೆ ಜೋಳದ ಅಭಾವ ಜಾಸ್ತಿ 80-92 ರೂಪಾಯಿಗಳವರೆಗೆ ಸರ್ಕಾರಕ್ಕೆ ಲೆವಿ ಕೊಟ್ಟಮೇಲೆ ಸರ್ಕಾರದ ನಿರ್ಬಂಧವಿರುವುದಿಲ್ಲ. ಸ್ಟಾಕ್ ಇಟ್ಟು ಸುಮಾರು 2-3 ರೂಪಾಯಿಗಳ ಲಾಭದಲ್ಲಿ ಮಾರಬಹುದೆಂದು ಹೇಳುತ್ತಾರೆ. ಆದರೆ ವ್ಯಾಪಾರಸ್ಥರು ಸೊಸೈಟಿಯಿಂದ ಕಡಿಮೆ ಬೆಲೆಗೆ ತೆಗೆದು ಮಾರುವಾಗ 5 ರೂಪಾಯಿಗಳಿಗೆ ಹೆಚ್ಚಿಗೆ ನಫೆ ಪಡೆಯುತ್ತಾರೆ. ಇದನ್ನು ವಿಚಾರ ಮಾಡಿ ಪರಿಶೀಲಿಸುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಸೊಸೈಟಿಗಳು ಇರುವುದು ವ್ಯಾಪಾರ ಮಾಡುವುದಕ್ಕೆ ವ್ಯಾಪಾರಸ್ಥರು ಜಾಸ್ತಿ ಬೆಲೆಗೆ ಮಾರುತ್ತಿದ್ದಾರೆಂಬುದು ನನಗೆ ಗೊತ್ತಿಲ್ಲ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಇದುವರೆಗೂ ಸಂಗ್ರಹ ಮಾಡಿದ ಬತ್ತ, ಜೋಳವನ್ನು ಸುವ್ಯವಸ್ಥಿತವಾಗಿಡಲು ಸರ್ಕಾರದವರು ಈಗ ಏನೇನು ಕ್ರಮಗಳನ್ನು ಕೈಗೊಂಡಿದ್ದಾರೆ?

ಶ್ರೀ ಡಿ. ದೇವರಾಜ್ ಅರಸ್.—ಈ ಆಹಾರ ಪದಾರ್ಥಗಳನ್ನು ಸಂಗ್ರಹ ಮಾಡುವುದು ಗೋಡೌನುಗಳಲ್ಲಿ. ಅಲ್ಲಿ ಚೀಲಗಳಲ್ಲಿ ತುಂಬಿಡಲಾಗುವುದು. ಇಟ್ಟ ಕಡೆಯೇ ಅವನ್ನೆಲ್ಲಾ ಫ್ಯೂಮಿಗೇಷನ್ ಮಾಡುವ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾ ಇದ್ದಾರೆ.

Sri S. SIVAPPA.—Will the Government enquire into matter that in spite of giving a wide margin between the purchase and selling price in respect of rice and jowar, some of the co-operative societies are showing loss ?

ಶ್ರೀ ಡಿ. ದೇವರಾಜ್ ಅರಸ್.—ಸೊಸೈಟಿಗಳಿಗೆ ಮಾರ್ಜಿನ್ ಇಟ್ಟಿರತಕ್ಕದ್ದು 2-3 ಹಂತಗಳಲ್ಲಿದೆ. ಒಂದು ಕ್ವಿಂಟಾಲ್ ಬತ್ತಕ್ಕೆ 45 ರೂಪಾಯಿಗಳಾಗುತ್ತದೆ. ಅದು ಮೊದಲನೆಯ ದರ್ಜೆಯದು. ಆ ರೀತಿ ಹಳ್ಳಿಯವರು ಕಣಜದಲ್ಲಿ ಕೊಡುತ್ತಾರೆ. ಅದು ಮಿಲ್ಲಿಗೆ ಬಂದಲ್ಲಿ ಒಂದು ರೂಪಾಯಿ ಅದಕ್ಕೆ ಸೇರಿಸಿದರೆ 46 ರೂಪಾಯಿಗಳಿಗೇರುತ್ತದೆ. ಒಂದೂವರೆ ಕ್ವಿಂಟಾಲ್ ಬತ್ತಕ್ಕೆ ಒಂದು ಕ್ವಿಂಟಾಲ್ ಅಕ್ಕಿ ಸಿಕ್ಕುತ್ತದೆ. ಆಗ ಅದಕ್ಕೆ ಬೆಲೆ 67½ ರೂಪಾಯಿಗಳಾಗುತ್ತದೆ. ನಾವು 73 ರೂಪಾಯಿಗಳಿಗೆ ಮಿಲ್ ಪಾಯಿಂಟ್‌ನಲ್ಲಿ ಅದನ್ನು ಮಾರಾಟ ಮಾಡುವುದು ಎಂಬುದಾಗಿ ಕರಾರು ಮಾಡಿದ್ದೇವೆ, ಅದರ ಪ್ರಕಾರ ಸೊಸೈಟಿಯವರು ಹೋಲ್ ಸೇಲರ್ಸಿಗೆ 73½ ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ. ಹೀಗೆ 4-6 ರೂಪಾಯಿಗಳ ಅಂತರ ಇರುತ್ತದೆ. ಮಿಲ್‌ನಲ್ಲಿ ಹಲ್ ಮಾಡುವುದು, ಕೆಲವು ದಿವಸಗಳ ತನಕ ಸ್ಟಾಕ್ ಇಡುವುದು, ಷ್ರಿಂಕೇಜ್ ಚೀಲ ವಗೈರೆ ಖರ್ಚು ಹ್ಯಾಂಡಲಿಂಗ್ ಚಾರ್ಜಸ್ ಎಲ್ಲಕ್ಕಿಂತ ಹೆಚ್ಚಾಗಿ ಬಂಡವಾಳಕ್ಕೆ ಬಡ್ಡಿ ಇದನ್ನೆಲ್ಲಾ ಲೆಕ್ಕ ಹಾಕಿ ನಷ್ಟವಾಗದಿರುವ ಹಾಗೆ ಮಾಡಿದ್ದೇವೆ. ಆದ್ದರಿಂದ ಸೊಸೈಟಿಗಳಿಗೆ ಈ ಮಾರ್ಜಿನ್ ಇಟ್ಟಿದ್ದರೂ ಕೆಲವು ಕಡೆಗಳಲ್ಲಿ ನಷ್ಟವಾಗಿರುವುದನ್ನು ಸರ್ಕಾರದವರು ಈಗಾಗಲೇ ಪರ್ಯಾಲೋಚನೆ ಮಾಡುತ್ತಿದ್ದಾರೆ. ಏಕೆಂದರೆ ಬಂಡವಾಳ ಹತ್ತಾರುಸಾವಿರ ರೂಪಾಯಿಗಳಷ್ಟು ಹಾಕಿ ಬತ್ತವನ್ನು 6-8 ತಿಂಗಳುಗಟ್ಟಲೆ ಇಡಬೇಕಾಗಿ ಬರುತ್ತದೆ. ಅಂದಮೇಲೆ ಆ ಒಂದು ಬಂಡವಾಳಕ್ಕೆ ಬಡ್ಡಿಯನ್ನು ಯಾರು ಕೊಡುವವರು ? ಆದ್ದರಿಂದ ಕೆಲವು ಸೊಸೈಟಿಗಳಿಗೆ ನಷ್ಟವಾಗಿರುವುದರಿಂದ ಸ್ವಲ್ಪ ಮಾರ್ಜಿನ್ ಇಡಲಾಗಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಾನು ಶಿವಮೊಗ್ಗಾಕ್ಕೆ ಹೋಗಿದ್ದಾಗ ಅಲ್ಲಿ ಸೆಲಿಂಗ್ ಪ್ರೈಸ್ 72-73 ರೂಪಾಯಿಗಳವರೆಗೆ ಇತ್ತು. 69-70 ರೂಪಾಯಿಗಳು ಕಮ್ಮಿ ದರ್ಜೆ ಅಕ್ಕಿಗೆ ಇತ್ತು. ನಾನೇ ಕೊಳ್ಳಲು ಹೋದಾಗ 78 ರೂಪಾಯಿಗಳವರೆಗೆ ನನಗೆ ಅಡಿಷಿನಲ್ ಪ್ರೈಸ್ ಹಾಕಿದ್ದಾರೆ. ಗೌರ್ನಮೆಂಟ್ ಕೋಟಾದಲ್ಲಿ 100 ಕ್ವಿಂಟಾಲ್ ನಾನು ತೆಗೆದುಕೊಂಡಾಗ ಒಂದು ಕ್ವಿಂಟಾಲ್‌ಗೆ 30 ರೂಪಾಯಿಗಳಂತೆ ಲಾಭ ತಿನ್ನುತ್ತಿದ್ದಾರೆ. ಇಂತಹ ಲಾಭಕೋರತನದ ಕಾರ್ಯಕಿಂತ ಬೇರೆ ಏನಿದೆ ? ಇದನ್ನು ವಿಚಾರಿಸುತ್ತೀರ ?

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರು ಹೇಳುತ್ತಿರುವುದು ಅಕ್ಕಿಯ ವಿಷಯವಲ್ಲ. ಬತ್ತದ ಧಾರಣೆ ಇರಬಹುದು. ನಾನು ಮೊದಲೇ ತಿಳಿಸಿದ ಹಾಗೆ ಒಂದು ಕ್ವಿಂಟಾಲ್ ಅಕ್ಕಿಗೆ 1½ ಕ್ವಿಂಟಾಲ್ ಬತ್ತ ಬೇಕಾಗುತ್ತದೆ. ಆ ಪ್ರಕಾರ ಎಷ್ಟಾಗುತ್ತದೆಂಬುದನ್ನು ಲೆಕ್ಕ ಹಾಕಲಿ.

ಶ್ರೀ ಕೆ. ಲಕ್ಕಪ್ಪ.—ಈಗ ಮಾರಾಟದ ಬೆಲೆಯಲ್ಲಿ ವ್ಯತ್ಯಾಸವಿರುವುದೂ ಅಲ್ಲದೆ ಜಿಲ್ಲಾ ಮಾರ್ಕೆಟಿಂಗ್ ಸೊಸೈಟಿಯಿಂದ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗೆ ಈ ಆಹಾರ ಪದಾರ್ಥಗಳು ಬಂದಾಗ ಸಕ್ಕರೆ, ಗೋಧಿ ಚೀಲಗಳಿಂದ ಒಂದೊಂದು ಸೇರು ಈಚೆಗೆ ತೆಗೆದು ತಿರುಗಿ ಆ ಚೀಲಗಳನ್ನು ಹೊಲಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಯಾವುದಾದರೂ ಅಂತಹ ನಿದರ್ಶನವನ್ನು ಸ್ಪೆಸಿಫಿಕ್ಕಾಗಿ ಸರ್ಕಾರದ ಗಮನಕ್ಕೆ ತಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ಮಾರ್ಕೆಟಿಂಗ್ ಕೊ-ಆಪರೇಟಿವ್ ಸೊಸೈಟಿಯಲ್ಲಿ ಈಗ ಅಂತಹ ಅಕ್ರಮ ನಡೆಯುತ್ತಿದೆ. ಆ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಅಂತಹ ಅಕ್ರಮ ಅಲ್ಲಿ ಕಂಡು ಬಂದರೆ, ನಿದಾರ್ಕ್ಷಿಣ್ಯವಾಗಿ ಸೂಕ್ತ ಕ್ರಮವನ್ನು ಅಲ್ಲಿ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಹಂಚಿಕೆ ಧಾರಣೆಗೂ ಕೊಳ್ಳುವ ಧಾರಣೆಗೂ ಬೇರೆ ಬೇರೆ ರೀತಿಯಾಗಿ ವ್ಯತ್ಯಾಸವಿರುವುದರಿಂದ ಓಪನ್ ಮಾರ್ಕೆಟ್ಟಿನಲ್ಲಿ ಹೋಲ್ ಸೇಲ್‌ನಲ್ಲಾಗಲೀ ಅಥವಾ ರೀಟೇಲ್‌ನಲ್ಲಾಗಲೀ ಧಾರಣೆ ಹೆಚ್ಚಾಗುವ ಕಾರಣ ಸೊಸೈಟಿಗಳಲ್ಲಿಯೂ ಕೂಡ ಕೆಲ ಮಟ್ಟಿಗೆ ಅಚಾತುರ್ಯಗಳು, ಅನಾಹುತಗಳಾಗುವುದಕ್ಕೆ ಅವಕಾಶವಿರುವುದರಿಂದ ಈ ಬಗ್ಗೆ ಸರ್ಕಾರದವರು ತಕ್ಕ ಕ್ರಮವನ್ನು ತೆಗೆದುಕೊಳ್ಳಲು ಏನಾದರೂ ಯೋಚನೆ ಮಾಡುತ್ತಾರೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಈಗಾಗಲೇ ನಾವು ಯೋಚನೆ ಮಾಡುತ್ತಿದ್ದೇವೆ. ಸೊಸೈಟಿಗಳಿಂದ ಈ ಆಹಾರ ಹಂಚಿಕೆ ಮಾಡುವುದು by and large ಉತ್ತಮವಾಗಿದೆ ಎಂದು ಕಂಡು ಬರುತ್ತಿದೆ. ಗ್ರಾಮಗಳಲ್ಲಿ ಬೆಳೆದಿದ್ದನ್ನೆಲ್ಲಾ ಅದರಲ್ಲೂ ರಾಗಿ, ಬತ್ತ, ಜೋಳವನ್ನೆಲ್ಲಾ ಸರ್ಕಾರದವರು ಕೊಂಡುಕೊಳ್ಳದೇ ಇರುವುದರಿಂದ ಬೇರೆಯವರು ಹೆಚ್ಚಿಗೆ ತೆಗೆದುಕೊಂಡು ಮಾರಾಟ ಮಾಡುತ್ತಾರೆ. ಅದು ಬೇರೆ ಮಾತು. ಅಂತಹ ಸಂದರ್ಭದಲ್ಲಿ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಯಾವ್ಯಾವ ಸೊಸೈಟಿಗಳು ಈ ಆಹಾರ ಪದಾರ್ಥಗಳನ್ನು ಪ್ರೊಕ್ಯೂರ್ ಮಾಡಿದ್ದಾರೋ ಅಂತಹವರ ಮೇಲೆ ಸರ್ಕಾರದ ಹತೋಟಿ ಇದೆ. ಒಂದು ವೇಳೆ ಯಾವುದಾದರೂ ಸೊಸೈಟಿ ಕಾನೂನಿಗೆ ಮೀರಿ ಮಾರಾಟ ಮಾಡುತ್ತಿದ್ದರೆ ಅಂತಹವರ ಮೇಲೂ ಸರ್ಕಾರ ಹತೋಟಿಯನ್ನು ಇಡುವುದಕ್ಕೆ ಸಾಕಷ್ಟು ಸಿಬ್ಬಂದಿ ಅವಕಾಶವಿದೆ. ಆದರೆ ದೇಶದಲ್ಲಿ ಬೆಳೆದಿದ್ದನ್ನೆಲ್ಲಾ ಸರ್ಕಾರವೇ ಕೊಂಡುಕೊಳ್ಳಬೇಕೆನ್ನುವ ನೀತಿ ಸರಿಯಲ್ಲ. ಅದಕ್ಕೆ ಅನೇಕ ತೊಂದರೆಗಳಿವೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಸರ್ವೇಸಾಧಾರಣ ಬತ್ತ ಕೊಳ್ಳುವ ಬೆಲೆ 45 ರೂಪಾಯಿ ಇರುವುದರಿಂದ ಸರ್ಕಾರದವರು ಅಕ್ಕಿಯ ಬೆಲೆಯನ್ನು ನಿಗದಿ ಮಾಡಬೇಕು. ಏಕೆಂದರೆ ವ್ಯಾಪಾರಸ್ಥರು ಮಾರುವ ಬೆಲೆ 80 ರೂಪಾಯಿ ಮಾಡುವ ಪರಿಸ್ಥಿತಿ ಬರುತ್ತಿದೆ. ಇದರಿಂದ ರೈತರಿಗೆ ಏನು ಕಷ್ಟವೂ ಬಾರದ ಹಾಗೆ ಮಾರಾಟ ತೆರಿಗೆ ವಿನಾಯಿತಿ ಕೊಡುವ ಬಗ್ಗೆ ರಕ್ಷಣೆ ಕೊಡುವ ಆಲೋಚನೆಯನ್ನು ಸರ್ಕಾರದವರು ಮಾಡುತ್ತಾರೆಯೇ ?

ಶ್ರೀ ಡಿ. ದೇವರಾಜ್ ಅರಸ್.—ರೈತರಿಗೆ ಆ ಒಂದು ರಕ್ಷಣೆ ಕೊಡುವ ದೃಷ್ಟಿಯಿಂದ ಹಾಗೂ ರೈತರು ಬೆಳೆದ ಆಹಾರ ಪದಾರ್ಥಗಳಿಗೆ ಸರಿಯಾದ ಬೆಲೆ ಸಿಗಲಿ ಎಂದೇ ನಾವು ಸರ್ಕಾರದಿಂದ ಬೆಲೆ ನಿಗದಿ ಮಾಡಿರುವುದು. ಸರ್ಕಾರದವರು ಇಲ್ಲಿಯವರೆಗೊ ಬೆಲೆಯನ್ನು ನಿಖರವಾಗಿ ನಿಗದಿ ಮಾಡಿ ಇಷ್ಟಕ್ಕೇ ಕೊಂಡುಕೊಳ್ಳಬೇಕೆಂದು ಹೇಳಿರಲಿಲ್ಲ. ಇಲ್ಲಿಯವರೆಗೂ ಈ ತರಹ ಬೆಲೆ ರೈತರಿಗೆ ಯಾವ ಕಾಲದಲ್ಲಿಯೂ ಸಿಕ್ಕಿಲ್ಲ. ರೈತರನ್ನು ಶೋಷಣೆ ಮಾಡಿಕೊಂಡೇ ಖಾಸಗೀ ವರ್ತಕರು ಇದುವರೆಗೂ ಮಾರಾಟ ಮಾಡುತ್ತಿದ್ದಿರು. ಆದ್ದರಿಂದ ಈಗ ಸರ್ಕಾರದವರು ನಿಗದಿ ಮಾಡಿರುವ ಬೆಲೆ ರೈತರ ದೃಷ್ಟಿಯಿಂದ ಉತ್ತೇಜನಕಾರಿಯಾಗಿದೆ.

9-00 A.M.

ಶ್ರೀ ಎ. ಜೆ. ದೊಡ್ಡಮೇಟಿ.—ಸರ್ಕಾರದವರು ಆಹಾರಧಾನ್ಯವನ್ನು ಖರೀದಿ ಮಾಡುವಾಗ ಸಹಕಾರಿ ಸಂಸ್ಥೆಗಳ ಮೂಲಕವಾಗಲೀ, ಅಥವಾ ವ್ಯಾಪಾರಸ್ಥರ ಮೂಲಕವಾಗಲೀ ಖರೀದಿ ಮಾಡದೆ ಸರ್ಕಾರದವರೇ ನೇರವಾಗಿ ಆಹಾರಧಾನ್ಯವನ್ನು ಖರೀದಿ ಮಾಡಿದರೆ ಅದನ್ನು ಗಿರಾಕಿಗಳಿಗೆ ಕಡಿಮೆ ದರದಲ್ಲಿ ಮಾರುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರದವರು ಈ ಪ್ರಶ್ನೆಯನ್ನು ಆಲೋಚನೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಸೊಸೈಟಿಗಳ ಮುಖೇನ ಸರ್ಕಾರದವರು ಆ ಕೆಲಸವನ್ನು ಮಾಡಿಸುತ್ತಾ ಇರುವುದರಿಂದ ಸರ್ಕಾರ ಒಂದು ಏಜೆನ್ಸಿಯನ್ನು ಇಟ್ಟುಕೊಂಡು ಆ ಕೆಲಸವನ್ನು ಮಾಡಿಸುತ್ತಿದ್ದಾರೆಂದು ಭಾವಿಸಬೇಕು. ಸರ್ಕಾರದವರೇ ನೇರವಾಗಿ ಆಹಾರಧಾನ್ಯವನ್ನು ಖರೀದಿ ಮಾಡಬೇಕೆಂದರೆ, ಈಗ ಸರ್ಕಾರದವರು ಒಬ್ಬ ಇನ್ಸ್‌ಪೆಕ್ಟರನ್ನು ಆ ಕೆಲಸಕ್ಕೆ ನೇಮಕ ಮಾಡಿದರೆ ಅವರೇ ನೇರವಾಗಿ ಚೀಲ ತೆಗೆದುಕೊಂಡು ಹೋಗಿ ದವಸವನ್ನು ಅಳೆಸುವುದಕ್ಕಾಗುತ್ತದೆಯೆ ? ಅಂತೂ ಸ್ವಲ್ಪ ಹೆಚ್ಚು ಕಡಿಮೆ ಸರ್ಕಾರದ ಹತೋಟಿಯಲ್ಲಿಯೇ ಆಹಾರಧಾನ್ಯಗಳ ಪ್ರೊಕ್ಯೂರ್‌ಮೆಂಟ್ ಆಗುತ್ತಿದೆ.

Sri S. SIVAPPA.—The Hon'ble Minister has said that handling charges to the extent of Rs. 8 to 10 has been incurred. Will the Government consider the feasibility of asking the ryots directly to supply rice at the purchase rate you have fixed ?

Sri D. DEVARAJ URS.—That is a very difficult proposition and impractical also. The moment we say the ryots can give rice instead of paddy, he will start giving it at his own option. Supposing all the ryots

go at the same time, where are the mills to hull paddy that is brought by them ? That is an impossibility. Supposing we ask him to keep it in his house, I am not sure of procurement at all. That is an impossible proposition.

Lifting the ban on Transportation of Foodgrains.

**Q.*—224. SRI G. DUGGAPPA (Holalkere).—

Will the Government be pleased to state :—

(*a*) whether they have lifted the ban on transportation of food-grains from one district to another district in the State ;

(*b*) whether it has come to their notice that the prices of food-grains have gone high after the removal of ban on the movement of foodgrains ?

A.—SRI D. DEVARAJ URS (Minister for Transport and Tourism) [on behalf of SRI B. D. JATTI (Minister for Food)].—

(*a*) Yes. From 5-6-1965.

(*b*) Yes ; to some extent in certain areas.

ಶ್ರೀ ಜಿ. ದುಗ್ಗಪ್ಪ.—ಕೆಲವು ಪ್ರದೇಶಗಳಲ್ಲಿ ಸ್ವಲ್ಪಮಟ್ಟಿಗೆ ಆಹಾರ ಧಾನ್ಯಗಳ ಬೆಲೆಗಳಲ್ಲಿ ಏರಿಕೆಯುಂಟಾಗಿದೆ ಎಂದು ಹೇಳಿದ್ದೀರಿ, ಇದರ ಬಗ್ಗೆ ಡಿಸ್ಟ್ರಿಕ್ಟ್‌ವೈಜ್ ಅಂಕಿ ಅಂಶಗಳನ್ನು ಕೊಡುವುದಕ್ಕೆ ಸಾಧ್ಯವಿದೆಯೇ ?

† ಶ್ರೀ ಡಿ. ದೇವರಾಜ ಅರಸ್.—ಬೇರೆ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರವನ್ನು ಹೇಳುತ್ತೇನೆ.

ಶ್ರೀ ಜಿ. ದುಗ್ಗಪ್ಪ.—ಚಿತ್ರದುರ್ಗದಲ್ಲಿ ಒಂದು ಕೆ.ಜಿ. ಹಾಲುಬ್ಬಲು ಅಕ್ಕಿಗೆ 1 ರೂಪಾಯಿ 40 ಪೈಸಾದಂತೆ ಮಾರಾಟ ಮಾಡುತ್ತಿದ್ದಾರೆ. ಆಹಾರಧಾನ್ಯವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವ ಸಂಬಂಧದಲ್ಲಿದ್ದ ನಿರ್ಬಂಧವನ್ನು ತೆಗೆದ ನಂತರ ಈ ರೀತಿ ಅಕ್ಕಿಯ ಬೆಲೆಯಲ್ಲಿ ಏರಿಕೆ ಉಂಟಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಅಕ್ಕಿಯನ್ನು ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಸಾಗಿಸುವುದಕ್ಕೆ ನಿರ್ಬಂಧ ಮಾಡಿಲ್ಲ. ಇದರ ಮೇಲೆ ಮೊದಲು ಏನು ನಿರ್ಬಂಧ ಇತ್ತೋ ಅದನ್ನು ಈಗ ತೆಗೆದು ಹಾಕಿದ್ದೇವೆ, ಇದರ ಜೊತೆಗೆ ಅಕ್ಕಿಯ ಪರಮಾವಧಿ ಬೆಲೆಯನ್ನು ನಿಗದಿ ಮಾಡಿದ್ದನ್ನು ತೆಗೆದು ಹಾಕಿದ್ದೇವೆ. ಸರ್ಕಾರದ ಏಜೆನ್ಸಿಯಾದ ಸೊಸೈಟಿಗಳ ಮುಖೇನ ತೆಗೆದುಕೊಂಡ ಬತ್ತವನ್ನು ಅಕ್ಕಿ ಮಾಡಿ ಕೊಡುವ ಬೆಲೆಯನ್ನು ನಾವು ನಿಗದಿ ಮಾಡಿದ್ದೇವೆ. ಅದಲ್ಲದೆ ಹಿಂದೆ ಪ್ರೊಕ್ಯೂರ್ ಮಾಡಿ ಉಳಿದಂತಹ ಬತ್ತ ಮತ್ತು ಅಕ್ಕಿಯು ಖಾಸಗೀ ಜನರ ಕೈಯಲ್ಲಿವೆ. ಅದರ ಪರಮಾವಧಿ ಬೆಲೆಯನ್ನು ನಿಗದಿ ಮಾಡುವುದಕ್ಕೆ ಅದು ವರ್ಕಬಲ್ ಅಲ್ಲ ಎಂದು ಅದನ್ನು ತೆಗೆದುಹಾಕಿದ್ದೇವೆ. ಇದರ ಪರಿಣಾಮವಾಗಿ ಕೆಲವು ಕಡೆ ಬೆಲೆ ಜಾಸ್ತಿಯಾಗಿದೆ. ಇದು ಸ್ವಾಭಾವಿಕವಾಗಿ ಆಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಡಿಸ್ಟ್ರಿಕ್ಟ್ ಮೂವ್‌ಮೆಂಟ್ ಬ್ಯಾನ್ ತೆಗೆದಮೇಲೆ ಅಕ್ಕಿಯ ಬೆಲೆ ಜಾಸ್ತಿ ಆಯಿತು ಎನ್ನುವ ವದಂತಿ ಕೇಳಿಬರುತ್ತಿದೆ. ಕೆಲವು ಸಮಾಜ ಘಾತುಕರು ಸೇರಿಕೊಂಡು ಈ ರೀತಿ ಬೆಲೆಗಳನ್ನು ಜಾಸ್ತಿ ಮಾಡುತ್ತಿದ್ದಾರೆ. ಆದ್ದರಿಂದ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಏತಕ್ಕೆ ಪ್ರಯತ್ನ ಮಾಡುತ್ತಿಲ್ಲ ?

ಶ್ರೀ ಡಿ. ದೇವರಾಜ ಅರಸ್.—ಡಿಸ್ಟ್ರಿಕ್ಟ್ ಮೂವ್‌ಮೆಂಟ್ ಬ್ಯಾನ್ ತೆಗೆದಮೇಲೆ ಬೆಲೆಗಳು ಜಾಸ್ತಿ ಆಗಲಿಲ್ಲ. ಎಲ್ಲೆಲ್ಲಿ ಬೆಲೆಗಳು ಜಾಸ್ತಿಯಾಗಿತ್ತೋ ಅಲ್ಲೆಲ್ಲಾ ಬೆಲೆಗಳು ಕಡಿಮೆಯಾಗಿತ್ತು. ಇತ್ತೀಚೆಗೆ ಸುಮಾರು ಎರಡು ಮೂರು ತಿಂಗಳಿಂದ ಚಿತ್ರದುರ್ಗ ಡಿಸ್ಟ್ರಿಕ್ಟ್, ಮೈಸೂರು ಡಿಸ್ಟ್ರಿಕ್ಟ್ ಮತ್ತು ಮಂಡ್ಯ ಡಿಸ್ಟ್ರಿಕ್ಟ್‌ಗಳಲ್ಲಿ ಬೆಲೆಗಳು ಸ್ವಲ್ಪ ಜಾಸ್ತಿಯಾಗಿವೆ. ಇನ್ನು ಎರಡನೆಯದಾಗಿ ಕೆಲವು

†Indicates that the remarks or speeches have not been revised by the member concerned